

ಲಿಂಗಾಯತ ಧರ್ಮ ಪರ ರ‍್ಯಾಲಿ

ಬಿಜೆಪಿ ಯಾತ್ರೆಗೆ ಪರ್ಯಾಯವಾಗಿ ಕಾಂಗ್ರೆಸ್ ನಾಯಕರು ಕೂಡ ಜನರನ್ನು ತಲುಪುವ ಯಾತ್ರಾ ಹಾದಿ ಹಿಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲೇ ಮುಂದಿನ ಚುನಾವಣೆ ನಡೆಯಲಿದೆ ಎಂದು ಪಕ್ಷ ಘೋಷಿಸಿಬಿಟ್ಟಿದೆ. ಯಾತ್ರೆ ನಡೆಸುವಾಗಲೂ ಇದೇ ಜಿಜ್ಞಾಸೆ, ತಕರಾರು ಪಕ್ಷದಲ್ಲಿ ಎದ್ದಿತು. ಪಕ್ಷದ ರಾಜ್ಯ ಉಸ್ತುವಾರಿ ಕೆ.ಸಿ.ವೇಣುಗೋಪಾಲ್ ಸಂಧಾನ ಸೂತ್ರ ರೂಪಿಸಿ, ಈ ಅಂತರ್ ಕಲಹಕ್ಕೆ ತೆರೆ ಎಳೆದರು.

ಕಾಂಗ್ರೆಸ್ ನ 123 ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಲ್ಲಿ ಸರ್ಕಾರದ ವತಿಯಿಂದ ಸಾಧನಾ ಸಂಭ್ರಮ ಹೆಸರಿನಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಯಾತ್ರೆ. ವಿರೋಧ ಪಕ್ಷಗಳ ಶಾಸಕರು ಪ್ರತಿನಿಧಿಸುವ 101 ಕ್ಷೇತ್ರಗಳಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಜಿ. ಪರಮೇಶ್ವರ, ಕಾರ್ಯಾಧ್ಯಕ್ಷರಾದ ಎಸ್.ಆರ್. ಪಾಟೀಲ, ದಿನೇಶ್ ಗುಂಡೂರಾವ್, ಪ್ರಚಾರ ಸಮಿತಿ ಅಧ್ಯಕ್ಷ ಹಾಗೂ ಸಚಿವ ಡಿ.ಕೆ. ಶಿವಕುಮಾರ್ ನಾಯಕತ್ವದಲ್ಲಿ ಯಾತ್ರೆ ನಡೆಸುವುದು ಸೂತ್ರದ ಸಾರ. ಡಿಸೆಂಬರ್ 13ರಿಂದ ರಾಜಧಾನಿ ಬಿಟ್ಟಿರುವ ಸಿದ್ದರಾಮಯ್ಯ, ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕದ ಪ್ರವಾಸದಲ್ಲಿದ್ದಾರೆ. ಡಿ.20ರಿಂದ ಪರಮೇಶ್ವರ ನೇತೃತ್ವದಲ್ಲಿ ಪಕ್ಷದ ಯಾತ್ರೆಗೆ ಚಾಲನೆ ಸಿಕ್ಕಿದೆ.

ಎರಡೂ ರಾಷ್ಟ್ರೀಯ ಪಕ್ಷಗಳಿಗೆ ಸಮಬಲದ ಸ್ಪರ್ಧೆ ನೀಡಬೇಕು ಎಂಬ ಶಪಥ ತೊಟ್ಟಿರುವ ಜೆಡಿಎಸ್ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಕೂಡ ತಾನೇನು ಕಮ್ಮಿ ಎಂಬಂತೆ 'ಕರ್ನಾಟಕ ವಿಕಾಸವಾಹಿನಿ– ಕುಮಾರಪರ್ವ' ಎಂಬ ಹೆಸರಿಟ್ಟುಕೊಂಡು ರಾಜ್ಯದ ಜನರ ಮುಂದೆ ಹೊರಟಿದ್ದಾರೆ. ಇದರ ಜತೆಗೆ, ಮುಖ್ಯಮಂತ್ರಿಯಾಗಿದ್ದಾಗ ನಡೆಸಿದ್ದ ಜನಪ್ರಿಯ ಕಾರ್ಯಕ್ರಮಗಳಲ್ಲಿ ಒಂದಾದ ಗ್ರಾಮವಾಸ್ತವ್ಯವನ್ನೂ ಆರಂಭಿಸಿದ್ದಾರೆ. ಹೀಗೆ ಮೂರು ಪಕ್ಷಗಳೂ ಯಾತ್ರೆಯ ಬೆನ್ನೇರಿ ಮತಭಿಕ್ಷೆ ಕೇಳುತ್ತಿರುವುದು 2017ರ ಪ್ರಮುಖ ವರ್ಷದ ವಿದ್ಯಮಾನ.

## ರಾಜ್ಯ ಕಾರಣ

ಕಾಂಗ್ರೆಸ್ ದೇಶದಲ್ಲೇ ನೆಲಕಚ್ಚಿರುವ ಹೊತ್ತಿನಲ್ಲಿ ಆರ್ಥಿಕವಾಗಿ ಪ್ರಬಲವಾಗಿರುವ, ದೊಡ್ಡ ರಾಜ್ಯಗಳಲ್ಲಿ ಒಂದಾದ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವುದು ಆ ಪಕ್ಷದ ನಾಯಕರಿಗೆ ಬಿಗುಮಾನದ ಸಂಗತಿ. ಇಲ್ಲಿ ಬಿಜೆಪಿ ಅಧಿಕಾರಕ್ಕೆ ತರುವುದು ಆ ಪಕ್ಷದ ನಾಯಕರಿಗೆ ಸವಾಲಾಗಿದ್ದರೆ, ಇಲ್ಲಿರುವ ಅಧಿಕಾರ ಉಳಿಸಿಕೊಂಡು, ಮತ್ತೆ ದೇಶದಲ್ಲಿ ಕಾಂಗ್ರೆಸ್ ಅಲೆ ಎಬ್ಬಿಸುವುದು ಎಐಸಿಸಿಯ ಅಧ್ಯಕ್ಷಗಾದಿ ಅಲಂಕರಿಸಿರುವ ರಾಹುಲ್ ಗಾಂಧಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪ್ರತಿಷ್ಠೆಯ ಪಣ.

ಇದೇ ಕಾರಣಕ್ಕೆ ರಾಜ್ಯ ರಾಜಕಾರಣದಲ್ಲೂ ಮಹತ್ವದ ಬದಲಾವಣೆಯಾಗಿದೆ. ಇದೇ ವರ್ಷದ ಮೇ ತಿಂಗಳವರೆಗೆ ರಾಜ್ಯ ಕಾಂಗ್ರೆಸ್ ಗೆ ದಿಗ್ವಿಜಯಸಿಂಗ್ ಉಸ್ತುವಾರಿಯಾಗಿದ್ದರು. ಪಕ್ಷದ ಸಂಘಟನೆಯ ಮಹತ್ತರ ಜವಾಬ್ದಾರಿ ಇದ್ದರೂ ಅವರು ಯಾವಾಗ ಬರುತ್ತಾರೆ, ಯಾವಾಗ